# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1358 (1535) |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್. ಅರುಣ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19 /12/2025 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರ ಜಾರಿ ಮಾಡಿದ Gig Workers Social Security Act-2025 ಅನ್ವಯ ಅಗ್ರಿಗೇಟರ್ ಕಂಪನಿಗಳಿಂದ ಸಂಗ್ರಹಿಸಬೇಕಾದ 1%-5% ವೆಲ್‌ಫೇರ್ ಫೀ ಸಂಗ್ರಹಣೆಯ ಮಾಹಿತಿ ಪ್ರಮಾಣ ಎಷ್ಟು; ಕಂಪನಿವಾರು ಮತ್ತು ತ್ರೈಮಾಸಿಕವಾದ ಮಾಹಿತಿ ನೀಡುವುದು; ಈ ನಿಧಿಯಿಂದ Gig ಕಾರ್ಮಿಕರಿಗೆ ತಲುಪಿದ ಪ್ರಯೋಜನೆಗಳಾವುವು; (ವಿವರ ನೀಡುವುದು) | ಫ್ಲಾಟ್‌ಫಾರ್ಮ್ ಆಧಾರಿತ ಸೇವೆಗಳಾದ ಸ್ವಿಗ್ಗಿ, ಜೊಮ್ಯಾಟೊಗಳಲ್ಲಿ ಫುಡ್ ಡೆಲಿವರಿ ಮಾಡುವ ಹಾಗೂ ಇ-ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್‌ಕಾರ್ಟ್, ಬಿಗ್‌ಬ್ಯಾಸ್ಕೆಟ್ ಇವೇ ಮುಂತಾದವುಗಳಲ್ಲಿ ಪೂರ್ಣಕಾಲಿಕ ಅಥವಾ ಅರೇಕಾಲಿಕ ಡೆಲಿವರಿ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಅಸಂಘಟಿತ ಕಾರ್ಮಿಕರಾಗಿದ್ದು, ವಿವಿಧ ಕಾರ್ಮಿಕ ಕಾನೂನುಗಳಡಿ ಲಭ್ಯವಿರುವ ಸಾಮಾಜಿಕ ಭದ್ರತಾ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ.<br><br>ಇಂತಹ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ನಿಧಿ ಸಂಗ್ರಹಣೆ, ನಿರ್ವಹಣೆ ಹಾಗೂ ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ ವಿತರಣೆ ಮುಂತಾದವುಗಳನ್ನು ಕಾನೂನಾತ್ಮಕ ಚೌಕಟ್ಟಿಗೆ ತರುವ ಉದ್ದೇಶದಿಂದ ಕರ್ನಾಟಕ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ-2025 (The Karnataka Platform Based Gig Workers (Social Security and Welfare)Act, 2025) ಅನ್ನು ಸರ್ಕಾರವು ದಿನಾಂಕ:12-09-2025 ರಂದು ಜಾರಿಗೆ ತಂದಿರುತ್ತದೆ ಹಾಗೂ ನಿಯಮಾವಳಿಗಳನ್ನು ದಿನಾಂಕ:19-11-2025 ರಂದು ಅಧಿಸೂಚಿಸಿರುತ್ತದೆ.<br><br>ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕವು, ಫ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕನು ಪ್ರತಿ ವಹಿವಾಟಿಗೆ ಪಡೆಯುವ ಪಾವತಿಯ ಮೇಲೆ ಶೇ.1-5%ರಷ್ಟು ಇರುತ್ತದೆ. ರಾಜ್ಯ ಸರ್ಕಾರವು ವಹಿವಾಟಿನ ಆಧಾರದ ಮೇಲೆ ಶೇಕಡವಾರು ಶುಲ್ಕವನ್ನು ಅಧಿಸೂಚನೆಯ ಮೂಲಕ ನಿಗದಿಪಡಿಸಬೇಕಿದ್ದು, ಈ ಸಂಬಂಧ ಅಧಿಸೂಚನೆ ಹೊರಡಿಸುವುದು ಬಾಕಿ ಇರುತ್ತದೆ. |
| ಆ) | Gig/Platform ಆಧಾರಿತ ಕಾರ್ಮಿಕರಿಗೆ ಕಲ್ಪಿಸಬೇಕಾದ ಸಾಮಾಜಿಕ ಭದ್ರತೆ (ಇನ್ಶೂರೆನ್ಸ್, ಪಿಎಫ್, ಸೇಫ್ಟಿ ನೋರ್ಮ್ಸ್, ಕೆಲಸದ ಗಂಟೆಗಳ ನಿಯಮ) ground level ನಲ್ಲಿ ಅನುಷ್ಠಾನವಾಗದ ಕುರಿತು ವ್ಯಾಪಕ ದೂರುಗಳಿದ್ದು ಇದಕ್ಕಾಗಿ ತೆಗೆದುಕೊಂಡಿರುವ ನಿಖರ ಕ್ರಮಗಳೇನು; | |
| ಇ) | Gig Workers Welfare Board ರಚನೆ, ಸದಸ್ಯರ ಆಯ್ಕೆ, ಸಭೆಗಳ ನಿಯಮಿತತೆ ಹಾಗೂ ಕುಂದು ಕೊರತೆ ಪರಿಹಾರ (grievance-redressal) ವ್ಯವಸ್ಥೆ ಕುರಿತು ಸರ್ಕಾರ ಸ್ಪಷ್ಟ ಮಾರ್ಗಸೂಚಿ ಜಾರಿಗೊಳಿಸಿರುವುದೇ; (ಮಾಹಿತಿ ನೀಡುವುದು) | |

| | | |
|---|---|---|
| | | ನಿಯಮಾವಳಿಗಳನ್ನು ದಿನಾಂಕ:19-11-2025 ರಂದು ಅಧಿಸೂಚಿಸಿರುವುದರಿಂದ ಕಾಯ್ದೆ ಹಾಗೂ ನಿಯಮಾವಳಿಗಳ ಅನುಷ್ಠಾನದ ಕ್ರಮಗಳು ಪ್ರಗತಿಯಲ್ಲಿದ್ದು, ಕಾಯ್ದೆ ಮತ್ತು ನಿಯಮಗಳಲ್ಲಿ ಪ್ರಸ್ತಾಪಿಸಿರುವಂತೆ, ಕಾರ್ಮಿಕರಿಗೆ ಸಂಬಂಧಿಸಿದ ಸುರಕ್ಷತೆ, ಸಾಮಾಜಿಕ ಭದ್ರತೆ ಮುಂತಾದ ವಿಷಯಗಳ ಕುರಿತಾಗಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು. |
| ಈ) | ಹೊಸದಾಗಿ ಜಾರಿಗೆ ಬಂದ ಲೇಬರ್ ಕೋಡ್ ಅಡಿ ಗುರುತಿಸಲಾಗದ gig ಮತ್ತು contract ಕಾರ್ಮಿಕರ ಕೆಲಸದ(ಸೇವಾ) ಭದ್ರತೆ, ಕನಿಷ್ಠ ವೇತನ ಹಾಗೂ ಹಕ್ಕುಗಳು ಕುಂಠಿತವಾಗುತ್ತಿವೆ ಎಂಬ ಕಾರ್ಮಿಕ ಸಂಘಟನೆಗಳ ಆರೋಪಗಳ ಬಗ್ಗೆ ಸರ್ಕಾರದ ನಿಲುವು ಏನು; ಈ ವರ್ಗದ ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕೇಂದ್ರ ಸರ್ಕಾರವು ಕಾರ್ಮಿಕ ಸಂಹಿತೆಯನ್ನು ದಿನಾಂಕ:21-11-2025 ರಂದು ಜಾರಿಗೆ ತಂದಿದೆ. ಕೇಂದ್ರ ಸರ್ಕಾರವು ಅಂತಿಮ ನಿಯಮಾವಳಿಗಳನ್ನು ರೂಪಿಸಿದ ನಂತರ ರಾಜ್ಯ ಸರ್ಕಾರದಿಂದ ನಿಯಮಾವಳಿಗಳ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |

**ಕಾಇ 513 ಎಲ್ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**